**ಸಾಕ್ಷಿಯನ್ನು ದಿನಾಂಕ 10.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 17.7.2020 ರಂದು ವಾದಿಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ಕಛೇರಿ ಪ್ರತಿಯ ದೃಢಿಕೃತ ನಕಲನ್ನು ನಿಡಿ1 ಎಂದು, ದಿನಾಂಕ 17.7.2020 ರಂದು ಓ.ಎಸ್ 68/2020 ರ ವಾದಿಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ಕಛೇರಿ ಪ್ರತಿಯ ದೃಢಿಕೃತ ನಕಲನ್ನು ನಿಡಿ2 ಎಂದು, ಎರಡು ಅಂಚೆ ರಶೀದಿಗಳ ದೃಢಿಕೃತ ನಕಲನ್ನು ನಿಡಿ3 ಮತ್ತು ನಿಡಿ4 ಎಂದು, ದಿನಾಂಕ 16.7.2020 ರ ಎರಡು ಡಿ.ಡಿ. ಗಳ ನೋಟರಿ ದೃಢೀಕೃತ ಪ್ರತಿಯ ದೃಢಿಕೃತ ನಕಲನ್ನು ನಿಡಿ5 ಮತ್ತು ನಿಡಿ6 ಎಂದು, ದಿನಾಂಕ 23.7.2020 ರ ಆಂದೋಲನ ದಿನಪತ್ರಿಕೆಯ ದೃಢಿಕೃತ ನಕಲನ್ನು ನಿಡಿ7 ಎಂದು, ಅದರಲ್ಲಿರುವ ಈ ಕೇಸಿಗೆ ಸಂಬಂಧಪಟ್ಟ ಸಾರ್ವಜನಿಕ ತಿಳುವಳಿಕೆ ನೋಟಿಸಿನ ಭಾಗದ ದೃಢಿಕೃತ ನಕಲನ್ನು ನಿಡಿ7 ಎ ಎಂದು, ಡಿ.ಆರ್.ಟಿ, ಬೆಂಗಳೂರು ಇವರಿಂದ ಬಂದಿರುವ ಸಮನ್ಸನ ದೃಢಿಕೃತ ನಕಲನ್ನು ನಿಡಿ8 ಎಂದು, ದಿನಾಂಕ 30.1.2019 ರಂದು ಚೋಳಮಂಡಲಂ ಫೈನಾನ್ಸಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ಕಛೇರಿ ಪ್ರತಿಯ ದೃಢಿಕೃತ ನಕಲನ್ನು ನಿಡಿ9 ಎಂದು, ದಿನಾಂಕ 22.11.2018 ರಂದು ಕೊಟಕ್ ಮಹಿಂದ್ರ ಬ್ಯಾಂಕಿನವರು ನನಗೆ ನೀಡಿರುವ ನೋಟಿಸಿನ ದೃಢಿಕೃತ ನಕಲನ್ನು ನಿಡಿ10 ಎಂದು, ಡಿ.ಆರ್.ಟಿ, ಬೆಂಗಳೂರು ರವರು ಕಳುಹಿಸಿರುವ ಇನ್ನೊಂದು ಸಮನ್ಸನ ದೃಢಿಕೃತ ನಕಲನ್ನು ನಿಡಿ11 ಎಂದು, ದಿನಾಂಕ 2.11.2018 ರಂದು ಚೋಳಮಂಡಲಂ ಫೈನಾನ್ಸನವರು ನನಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ದೃಢಿಕೃತ ನಕಲನ್ನು ನಿಡಿ12 ಎಂದು, ದಿನಾಂಕ 1.12.2018 ರಂದು ಮಹಿಂದ್ರ ಅಂಡ್ ಮಹಿಂದ್ರ ಫೈನಾನ್ಸನವರು ನೀಡಿರುವ ನೋಟಿಸಿನ ದೃಢಿಕೃತ ನಕಲನ್ನು ನಿಡಿ13 ಎಂದು, ದಿನಾಂಕ 11.1.2019 ರಂದು ಚೋಳಮಂಡಲಂ ಫೈನಾನ್ಸನವರು ನನಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ದೃಢಿಕೃತ ನಕಲನ್ನು ನಿಡಿ14 ಎಂದು, ಮದ್ರಾಸಿನ ಉಚ್ಚ ನ್ಯಾಯಾಲಯದಲ್ಲಿ ಚೋಳಮಂಡಲಂ ಫೈನಾನ್ಸನವರು ಅರ್ಬಿಟೇಶನ್ ಅಡಿ ಸಲ್ಲಿಸಿರುವ ಅರ್ಜಿ ಸಂಖ್ಯೆ 82/2019 ರ ಅರ್ಜಿಯನ್ನು ಅವರ ವಕೀಲರು ನನಗೆ ಕಳುಹಿಸಿದ್ದು ಅದರ ದೃಢಿಕೃತ ನಕಲನ್ನು ನಿಡಿ15 ಮತ್ತು ನಿಡಿ16 ಎಂದು, ಮಹಿಂದ್ರ ಅಂಡ್ ಮಹಿಂದ್ರ ರವರು ನೀಡಿರುವ ಫೈನಲ್ ನೋಟಿಸಿನ ದೃಢಿಕೃತ ನಕಲನ್ನು ನಿಡಿ17 ಎಂದು, ಓ.ಎಸ್ 8350/2018 ರ ಆದೇಶಪಟ್ಟಿಯ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ18 ಎಂದು, ಸದರಿ ದಾವೆಯಲ್ಲಿ ಚೋಳಮಂಡಲಂ ಫೈನಾನ್ಸನವರು ನ್ಯಾಯಾಲಯಕ್ಕೆ ಸಲ್ಲಿಸಿರುವ ನಾಲ್ಕು ಲೋನ್ ಅಗ್ರಿಮೆಂಟ್‌ಗಳ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ19 ರಿಂದ

ನಿಡಿ22 ಎಂದು, ಓ.ಎಸ್ 8421/2018ರ ಆದೇಶಪಟ್ಟಿಯ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ23 ಎಂದು, ಸದರಿ ದಾವೆಯಲ್ಲಿ ಚೋಳಮಂಡಲಂ ಫೈನಾನ್ಸನವರು ಹಾಜರುಪಡಿಸಿರುವ ಲೋನ್ ಅಗ್ರಿಮೆಂಟ್‌ನ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ24 ಎಂದು, ಓ.ಎಸ್ 8351/2018ರ ಆದೇಶಪಟ್ಟಿಯ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ25 ಎಂದು, ಸದರಿ ದಾವೆಯಲ್ಲಿ ಪ್ರತಿವಾದಿ ಸಂಸ್ಥೆಯವರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-2ರ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ26 ಎಂದು, ಸದರಿ ದಾವೆಯಲ್ಲಿ ಪ್ರತಿವಾದಿ ಸಂಸ್ಥೆಯವರು ಹಾಜರುಪಡಿಸಿರುವ ಎರಡು ಲೋನ್ ಅಗ್ರಿಮೆಂಟ್‌ನ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ27 ಮತ್ತು ನಿಡಿ28 ಎಂದು, ಓ.ಎಸ್ 8349/2018ರ ಆದೇಶಪಟ್ಟಿಯ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ29 ಎಂದು, ಸದರಿ ದಾವೆಯ ಮಧ್ಯಂತರ ಅರ್ಜಿ ಸಂಖ್ಯೆಯ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ30 ಎಂದು, ಕೇವಿಯೆಟ್ ಪೆಟಿಷನ್ ನಂ.6274/2018ರ ಅರ್ಜಿ ಮತ್ತು ಅದಕ್ಕೆ ಲಗತ್ತಿಸಿರುವ ದಾಖಲೆಗಳ ದೃಢಿಕೃತ ನಕಲನ್ನು ಒಟ್ಟಾಗಿ ನಿಡಿ31 ಎಂದು, ಓ.ಎಸ್ 8715/2018 ರ ಆದೇಶಪಟ್ಟಿಯ ದೃಢೀಕೃತ ನಕಲಿನ ದೃಢಿಕೃತ ನಕಲನ್ನು ನಿಡಿ32 ಎಂದು, ಸದರಿ ದಾವೆಯಲ್ಲಿ ಪ್ರತಿವಾದಿ ಸಂಸ್ಥೆಯವರು ಸಲ್ಲಿಸಿರುವ ಲೋನ್ ಅಗ್ರಿಮೆಂಟಿನ ದೃಢಿಕೃತ ನಕಲನ್ನು ನಿಡಿ33 ಎಂದು, ದಿನಾಂಕ 31.12.2016, 27.5.2016, 31.12.2016ರಂದು ಅರ್ಬಿಟೇಶನ್ ನಿಂದ ನನಗೆ ಕಳುಹಿಸಿರುವ ನೋಟಿಸುಗಳ ದೃಢಿಕೃತ ನಕಲನ್ನು ನಿಡಿ34 ರಿಂದ ನಿಡಿ36 ಎಂದು, ದಿನಾಂಕ 2.1.2019ರಂದು ಕೊಟಕ್ ಮಹಿಂದ್ರ ಫೈನಾನ್ಸನವರು ನನಗೆ ಕಳುಹಿಸಿರುವ ನೋಟಿಸಿನ ದೃಢಿಕೃತ ನಕಲನ್ನು ನಿಡಿ37 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.